

# ಚಿನ್ನದ ಗಣಿಯಿಂದ ಆಭರಣದವರೆಗೆ..

**ಭಾರತದ ಚಿನ್ನದ ಬೇಡಿಕೆ ವರ್ಷದಿಂದ ವರ್ಷಕ್ಕೆ ಏರುತ್ತಿದ್ದು, ಸದ್ಯ ಸ್ವಿಜರ್ಲೆಂಡ್, ಫ್ರಾನ್ಸ್, ಇಂಗ್ಲೆಂಡ್‌ನಂತಹ ಯುರೋಪ್ ದೇಶಗಳ ಜೊತೆಗೆ ಸಿಂಗಪುರ, ದುಬೈನಿಂದಲೂ ಚಿನ್ನದ ಗಟ್ಟಿಗಳು ಆಮದಾಗುತ್ತಿವೆ. ಈ ಚಿನ್ನದ ಗಟ್ಟಿಗಳು, ಬಿಸ್ಕತ್‌ಗಳು ಆಭರಣ ವರ್ತಕರಿಗೆ ತಲುಪುವ ಬಗೆ ಹೇಗೆ?**

**★ ಸುಧಾ ಹೆಗಡೆ**

ಹದಿನೈದು ದಿನಗಳ ಹಿಂದಷ್ಟೇ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ಘಟನೆಯಿದು. ನಿಲ್ದಾಣದ ಶೌಚಾಲಯದಲ್ಲಿ ಬೇಬಿ ಡಯಾಪರ್ ಎಸೆಯುವ ಡಬ್ಬಿಯಲ್ಲಿ 2.06 ಕೋಟಿ ರೂಪಾಯಿ ಮೊತ್ತದ ಚಿನ್ನದ ಗಟ್ಟಿ ಹಾಗೂ ವಜ್ರದ ಆಭರಣಗಳನ್ನು ಕಸ್ಟಮ್ಸ್‌ನ ಇಂಟೆಲಿಜೆನ್ಸ್ ಘಟಕ ವಶಪಡಿಸಿಕೊಂಡಿದ್ದು ವರದಿಯಾಯ್ತು. ಇದರ ಒಟ್ಟು ತೂಕ 6.5 ಕೆಜಿ. ಈ ಸಂಬಂಧ ಥಾಯ್ಲೆಂಡ್‌ನಿಂದ ಆಗಮಿಸಿದ್ದ ತಮಿಳುನಾಡಿನ ಪ್ರಯಾಣಿಕನ ಬಂಧನವೂ ನಡೆಯಿತು.

ಇದಕ್ಕೂ ಕೆಲವು ದಿನಗಳ ಹಿಂದೆ ಕೇರಳದ ತಿರುವನಂತಪುರ ವಿಮಾನ ನಿಲ್ದಾಣದಲ್ಲಿ ದುಬೈನಿಂದ ಆಗಮಿಸಿದ ಕೇರಳದ ಉದ್ಯಮಿಯೊಬ್ಬ 89 ಲಕ್ಷ ರೂಪಾಯಿ ಮೌಲ್ಯದ 3 ಕೆಜಿ ಚಿನ್ನ ಸಾಗಿಸುವಾಗ ಕಸ್ಟಮ್ಸ್ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದ. ಕಳೆದ ವಾರ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ವರದಿಯಾದ ಘಟನೆಯಂತೂ ಇನ್ನೂ ವಿಲಕ್ಷಣವಾಗಿತ್ತು. ದುಬೈನಿಂದ ಆಗಮಿಸಿದ ಪ್ರಯಾಣಿಕನೊಬ್ಬ 300 ಗ್ರಾಮಿಗಿಂತಲೂ ಅಧಿಕ ತೂಕದ ಬಂಗಾರದ ತುಣುಕುಗಳನ್ನು ಗುದದ್ವಾರದಲ್ಲಿಟ್ಟುಕೊಂಡು ಸಾಗಿಸುವಾಗ ಸಿಕ್ಕಿಬಿದ್ದ.

ಭಾರತದಲ್ಲಿ ಚಿನ್ನದ ಕಳ್ಳಸಾಗಣೆ ಇತ್ತೀಚೆಗೆ ವಿಪರೀತವಾಗಿದೆ. ಈ ಅಮೂಲ್ಯ ಲೋಹದ ಮೇಲಿನ ಆಮದು ಸುಂಕವನ್ನು ಶೇ. 10ಕ್ಕೆ ಹೆಚ್ಚಿಸಿದ ಮೇಲಂತೂ ದೇಶದೊಳಗೆ ನುಸುಳುವ ಅಕ್ರಮ ಚಿನ್ನದ ಮೊತ್ತದಲ್ಲಿ ಗಣನೀಯ ಏರಿಕೆಯಾಗಿದೆ ಎನ್ನುತ್ತದೆ ವರ್ಲ್ಡ್ ಗೋಲ್ಡ್ ಕೌನ್ಸಿಲ್ (ಡಬ್ಲುಜಿಸಿ) ವರದಿ.

80–90ರ ದಶಕದಲ್ಲಿ ದೊಡ್ಡ ಸಮಸ್ಯೆಯಾಗಿದ್ದ ಬಂಗಾರದ ಕಳ್ಳಸಾಗಣೆ ಜಾಲ ಸುಮಾರು 2003ರ ಹೊತ್ತಿಗೆ ಕಡಿಮೆಯಾಗಿತ್ತು. ಇದಕ್ಕೆ ಕಾರಣ ಬುಲಿಯನ್ ಮಾರುಕಟ್ಟೆಯನ್ನು ಮುಕ್ತವಾಗಿ ತೆರೆಯಲಾಗಿತ್ತು ಹಾಗೂ ಆಮದು ಸುಂಕ ತೀರಾ ಕಡಿಮೆಯಿತ್ತು. ಆದರೆ ಪುನಃ ಈ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದ್ದು, ಸಿಂಗಪುರ, ದುಬೈ, ಥಾಯ್ಲೆಂಡ್ ಮೊದಲಾದ ದೇಶಗಳಿಂದ ಚಿನ್ನ ವಿವಿಧ ರೂಪದಲ್ಲಿ ವ್ಯವಸ್ಥಿತ ಜಾಲಗಳ ಮೂಲಕ ಭಾರತಕ್ಕೆ ನುಸುಳುತ್ತಿದೆ. ನೇಪಾಳ, ಬಾಂಗ್ಲಾದೇಶದ ಗಡಿಗಳಲ್ಲೂ ಇದು ಜೋರಾಗಿಯೇ ನಡೆಯುತ್ತಿದೆ.

ಒಂದೆಡೆ ಚಾಲ್ತಿ ಖಾತೆ ಕೊರತೆಗೆ ಹೊಡೆತ ನೀಡುತ್ತಿರುವ ಚಿನ್ನದ ಆಮದನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರ ತೀವ್ರ ಪ್ರಯತ್ನ ಮಾಡುತ್ತಲೇ ಇದೆ. ಇನ್ನೊಂದು ಕಡೆ ಅಧಿಕೃತವಾಗಿ ಆಮದಾದ ಚಿನ್ನವೂ ಸಾಲದು ಎಂದು ಕಾನೂನಿನ ಅಡಿಯಲ್ಲಿ ನುಸುಳುವ ಇಂತಹ ದಂಧೆಗಳು ನಡೆಯುತ್ತಲೇ ಇವೆ. ಹಾಗಾದರೆ ಇಷ್ಟೊಂದು ಮೊತ್ತದ ಬಂಗಾರ ಎಲ್ಲಿ ಅಡಗಿ ಕುಳಿತಿದೆ ಎಂದು ಹುಡುಕುತ್ತ ಹೋದರೆ ಹಲವು ಕುತೂಹಲಕರ ಸಂಗತಿಗಳು ಹೊರಬೀಳುತ್ತವೆ.